

# ಗುಲ್ ಮರೆದ ದೇಶಪ್ರೇಮ

■ ಉಷಾರಾಣಿ ಟಿ.ಆರ್.

ನೀಲಾಚಲ ವೆಂಬುದೊಂದು ರಾಜ್ಯ. ಅಲ್ಲಿಯ ರಾಜ ನರೇಂದ್ರ. ವ್ಯಾಪಾರ ವಹಿವಾಟಿಗಾಗಿ ನರೇಂದ್ರ ಒಮ್ಮೆ ಪರ್ಷಿಯ ದೇಶಕ್ಕೆ ತೆರಳಿದ್ದ. ವ್ಯಾಪಾರವೆಲ್ಲ ಮುಗಿಸಿ ವಾಪಸ್ಸು ಬರಲು ತಯಾರಿ ನಡೆಸುತ್ತಿದ್ದ. ಅತಿ ಹೆಚ್ಚಿನ ಲಾಭವಾದುದರಿಂದ ಅವನು ಬಹಳ ಖುಷಿಯಲ್ಲಿದ್ದ. ಹೊರಡುವ ದಿನ ಅಲ್ಲಿನ ವರ್ತಕರ ಮುಖ್ಯಸ್ಥನ ಮಗಳು ಗುಲ್ ವಿಶೇಷವಾದ ಕಾಳಜಿ ವಹಿಸಿ ರಾಜನಿಗೆ ಔತಣ ಕೂಟವೇರ್ಪಡಿಸಿದ್ದಳು ಮತ್ತು ಅವನ ದಾರಿಗೆ ಕೆಂಪು ಗುಲಾಬಿಯನ್ನು ಹಾಕಿ ಸಿದ್ಧಪಡಿಸಿದ್ದಳು. ವರ್ತಕರ ಮುಖ್ಯಸ್ಥ ತನ್ನ ಮಗಳನ್ನು ಪರಿಚಯ ಮಾಡಿಸಿದ. ಅವಳ ಹೆಸರು ಗುಲಾಬಿಯಾದುದರಿಂದ ಅವಳು ಈ ರೀತಿ ತಯಾರಿ ಮಾಡಿದ್ದಾಳೆಂದು ತಿಳಿಸಿದ. ರಾಜನಿಗೆ ಗುಲ್ ಮೇಲೆ ಪ್ರೇಮಾಂಕರಿಸಿತು. ತಾನು ಗುಲ್‌ಳನ್ನು ಮದುವೆಯಾಗುವುದಾಗಿ ತಿಳಿಸಿದ. ರಾಜನ ಇಚ್ಛೆಯಂತೆ ಗುಲ್‌ಳನ್ನು ವಿವಾಹ ಮಾಡಿ ಕೊಟ್ಟರು. ರಾಜ ಅವಳಿಗಾಗಿ ಹೊಸ ಅರಮನೆಯೊಂದನ್ನು ಕಟ್ಟಿಸಿದ. ಅದರಲ್ಲಿ ಗುಲಾಬಿ ಹೊವುಗಳ ಚಿತ್ರಗಳನ್ನು ಹಾಗೂ ಗುಲಾಬಿ ತೋಟವನ್ನು ಮಾಡುವಂತೆ ತಿಳಿಸಿದ. ಗುಲ್‌ಗೆ ಅರಮನೆ ಬಹಳ ಮೆಚ್ಚುಗೆಯಾಯಿತು. ತನ್ನ ದೇಶದಲ್ಲಿ ಅವಳು ಇಷ್ಟು ವೈಭೋಗವನ್ನು ಕಂಡಿರಲೇ ಇಲ್ಲ. ಪಟ್ಟದ ರಾಣಿ ಗರ್ಭಿಣಿಯಾದಳು. ಕಾಲಾನಂತರ ಅವಳಿಗೆ ಗಂಡು ಮಗುಹುಟ್ಟಿತು. ಭಾಷೆ ಬರದೇ ಇದ್ದರೂ ಗುಲ್ ತನ್ನದೇ ರೀತಿಯಲ್ಲಿ ಮಗುವಿಗೆ ಪ್ರೀತಿಯನ್ನು ತೋರಿಸುತ್ತಿದ್ದಳು. ವಿಷಯ ಪರ್ಷಿಯ ದೇಶದವರೆಗೂ ಹಬ್ಬಿತು. ಗುಲ್ ತಂದೆಗೆ ಇದರಿಂದ ತುಂಬಾ ನಿರಾಶೆಯಾಯಿತು. ತನ್ನ ಮಗಳಿಗೆ ರಾಜ್ಯ ಸಿಗುವುದಿಲ್ಲ ಎಂದು ದುಃಖವಾಯಿತು. ಅದಕ್ಕೆಂದೆ ಒಂದು ನಾಟಕ ಕಟ್ಟಿದನು. ತನಗೆ ವ್ಯಾಪಾರದಲ್ಲಿ ಬಹಳ ನಷ್ಟವಾಗಿ ಎಲ್ಲವನ್ನೂ ಕಳೆದುಕೊಂಡು ನಿರ್ಗತಿಕನಾಗಿರುವೇನೆಂದು ಸುದ್ದಿ ಮಗಳಿಗೆ ತಲುಪಿಸಿದನು. ಇದನ್ನು ಕೇಳಿ ಗುಲ್ ಬಹಳ ಬೇಸರವಾಯಿತು. ಅವಳು ತನ್ನ ಬೇಸರವನ್ನು ರಾಜನ ಮುಂದೆ ತೋಡಿಕೊಂಡಳು. ಅದಕ್ಕೆ ರಾಜ ಸುಂಕರಹಿತವಾಗಿ ಬಂದು ತನ್ನ ರಾಜ್ಯದಲ್ಲಿ ವ್ಯಾಪಾರ ನಡೆಸುವಂತೆ ತಿಳಿಸಿದನು. ರಾಜ ಹಾಗೆ ಹೇಳಿದ್ದೇ ತಡ ಪ್ರತಿನಿತ್ಯ ಅನೇಕ ಪರ್ಷಿಯನ್ನರು ತಮ್ಮ ಸಾಮಾನು ಸರಂಜಾಮುಗಳೊಡನೆ ನೀಲಾಚಲಕ್ಕೆ ಬರತೊಡಗಿದರು. ಬಂದವರಿಗೆ ವಸತಿ ಅನ್ನ ಛತ್ರಗಳನ್ನು ರಾಜ ಕಟ್ಟಿಸಿದನು. ನಿಧಾನವಾಗಿ ನಗರದ ಪ್ರಮುಖ ಭಾಗಗಳಲ್ಲಿ ವ್ಯಾಪಾರ ಪ್ರಾರಂಭಿಸಿದರು. ತಮ್ಮ ದೇಶದ ಪೋಷಾಕನ್ನು ಪ್ರಚುರಪಡಿಸತೊಡಗಿದರು. ರಾಜ್ಯದ ಎಲ್ಲೆಡೆ ಪರ್ಷಿಯನ್ನರೆ ತುಂಬಿ ಹೋದರು. ಈ ಬೆಳವಣಿಗೆಯಿಂದ ಮಂತ್ರಿಗೆ ಬಹಳ ಯೋಚನೆ ಶುರುವಾಯಿತು. ಮಹಾರಾಣಿಯ ಬಳಿ ಪ್ರಸ್ತಾಪ ಮಾಡಿದನು. ಅದಕ್ಕೆ ಮಹಾರಾಣಿ ಗುಲ್ ತುಂಬಾ ಒಳ್ಳೆಯ ಹುಡುಗಿ. ಅವಳಿಗೆ ತೊಂದರೆಯಾಗುವುದು ಬೇಡ. ಎಲ್ಲಾ ಅವರಪ್ಪನ ಕಾರುಬಾರು. ಅವನಿಗೆ ಮಟ್ಟ ಹಾಕಬೇಕು. ಆದರೆ ಮಹಾರಾಜರಿಗೆ ತಿಳಿಯದಂತೆ ಎಂದು ತನ್ನ ಮನಸ್ಸಿನಲ್ಲಿಡುದನ್ನು ಮಂತ್ರಿಗಳ ಮುಂದೆ ಹೇಳಿದಳು. ರಾಣಿಯ ಮಾತು ಸರಿಯೆನಿಸಿತು ಮಂತ್ರಿಗೆ. ಹಾವೂ ಸಾಯಬಾರದು, ಕೋಲು ಮುರಿಯಬಾರದು ಎಂದು ಯೋಚಿಸಿ ಮಹಾರಾಜರಿಗೆ ತಾನು ಪರ್ಷಿಯಾ ದೇಶಕ್ಕೆ ಹೋಗಿ ಗುಲ್ ತಂದೆಗೆ ಸ್ವತಃ ಸಹಾಯ ಮಾಡಬೇಕೆಂದಿದ್ದೇನೆ. ಎಷ್ಟಾದರೂ ಅವರು ನಿಮ್ಮ ಮುದ್ದಿನ ರಾಣಿ. ಅವರಿಗೆ ಬೇಸರವಿರಬಾರದು ಎಂದು ತನ್ನ ಅನಿಸಿಕೆಯನ್ನು ರಾಜನ ಮುಂದಿಟ್ಟನು.. ರಾಜ ಅದಕ್ಕೊಪ್ಪಿದನು. ನಿಧಾನವಾಗಿ ರಾಜ್ಯದ ತುಂಬಾ ತಮ್ಮ ದೇಶದವರನ್ನು ತುಂಬಿ ತಮ್ಮ